# ಉಪತಹಶೀಲ್ದಾರರು, ಹಿರೇಹಡಗಲಿ ಇವರ ನ್ಯಾಯಾಲಯದಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಹಿರೇಮಠದ ಪಂಚಾಕ್ಷರಯ್ಯ ತಂದೆ ಹೆಚ್.ಎಂ.ಚನ್ನವೀರಯ್ಯ , ಹೊಳಲು ಗ್ರಾಮ, ಹಡಗಲಿ ತಾ. | ಹಿರೇಮಠದ ನಾಗಮ್ಮ ಗಂಡ ಚನ್ನವೀರಯ್ಯ , ಹೊಳಲು ಗ್ರಾಮ, ಹಡಗಲಿ ತಾ. |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹೊಳಲು | 438/ಎ/3 | 1–66 | ಖುಷ್ಕಿ |
| 2. | ,, | 438/ಎ/4 | 1–74 | ,, |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹೊಳಲು ಗ್ರಾಮದ ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ, ಹೊಳಲು ಗ್ರಾಮದ ನಿವಾಸಿಯಾದ ಹಿರೇಮಠದ ಪಂಚಾಕ್ಷರಯ್ಯ ತಂದೆ ಹೆಚ್.ಎಂ.ಚನ್ನವೀರಯ್ಯ ಇವರು ನೋಂದಣಿಯಾಗದ ಪಾಲುಪಟ್ಟಿ ಒಪ್ಪಿಗೆ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ದಿ:23–7–2013 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿ:29–7–2013 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ: 29–8–2013 ರಂದು ಹೊಳಲು ಗ್ರಾಮದ ನಿವಾಸಿಯಾದ ಹಿರೇಮಠದ ನಾಗಮ್ಮ ಗಂಡ ಚನ್ನವೀರಯ್ಯ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ಸಂಖ್ಯೆ 13/2013–14 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:12–9–2011 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರರು ಸದರಿ ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ತಕರಾರುದಾರರು ಹಾಜರಾಗಿ ಸಹರಿ ಜಮೀನು ತನ್ನ ಹೆಸರಿಗೆ ಇದ್ದು, ತನ್ನ ಮಗನಿಗೆ ಮಾಡಿಕೊಡಲು ತನಗೆ ಇಷ್ಟವಿಲ್ಲವೆಂದು, ಸದರಿ ಪ್ರಕರಣದಲ್ಲಿ ತನಗೆ ತಿಳಿಸದೇ ಮ್ಯುಟೇಷನ್‌ಗೆ ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ತಿರಸ್ಕರಿಸಿ ಈ ಮೊದಲಿನಂತೆ ತನ್ನ ಹೆಸರಿನಲ್ಲಿಯೇ ಉಳಿಸಲು ಕೋರಿರುತ್ತಾರೆ. ಅರ್ಜಿದಾರರು ಸಹ ತಕರಾರುದಾರರು ಹೇಳಿದಂತೆ ಈ ಮೊದಲಿನಂತೆ ಪಹನಿಯಲ್ಲಿರುವ ಹೆಸರುಗಳನ್ನು ಮುಂದುವರೆಸಲು ಕೋರಿದರು. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/05/2014–15 ದಿನಾಂಕ:17–10–2016 .

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ಸಂಖ್ಯೆ 13/2013–14 ರ ಪ್ರಕರಣದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.